ಮಾತ್ರ ನೋಡುತ್ತಾರೆ. ಅಲ್ಲಿನ ಬಣ್ಣಗಳು, ನೆರಳು-ಬೆಳಕು, ರೇಖೆಗಳು, ಖಾಲಿ ಜಾಗ, ಸಂಯೋಜನೆ ಇತ್ಯಾದಿ. ಜಗತ್ತಿನ ಯಾವುದೇ ಪೇಂಟಿಂಗ್ ನೋಡಿ, ಅದು ನಿಮ್ಮನ್ನು ತಟ್ಟುತ್ತದೆ. ಅದಕ್ಕೆ ಅಕ್ಷರಗಳ ಹಂಗಿಲ್ಲ. ಯಾವುದೇ ಚಿತ್ರವನ್ನು ತೆಗೆಯಲಿ ಜನ ಅದರ ಕಥೆ ಹುಡುಕಿಕೊಂಡು ಹೋಗುವುದಿಲ್ಲ. ನಾನೊಮ್ಮೆ ಆ್ಯಮ್‌ಸ್ಟರ್‌ಡ್ಯಾಂ ನಗರಕ್ಕೆ ಹೋಗಿದ್ದೆ. ಅಲ್ಲಿ ವ್ಯಾನ್‌ಗೊನ ಚಿತ್ರಕಲಾ ಮ್ಯೂಸಿಯಂ ಇದೆ. ಟಿಕೆಟ್ ಸುಲಭವಾಗಿ ಸಿಗುವುದಿಲ್ಲ. ಮೂರರಿಂದ ನಾಲ್ಕು ಸಾವಿರ ರೂಪಾಯಿಗಳಿಗೊಂದು ಟಿಕೆಟ್. ಮೂರ್ನಾಲ್ಕು ದಿನ ಕಾಯಬೇಕು. ಸಿಕ್ಕರೂ ಒಂದೇ ದಿನದಲ್ಲಿ ಬೇರೆ ಬೇರೆ ಅವಧಿಯಲ್ಲಿ ಹೋಗಿ ಚಿತ್ರಗಳನ್ನು ನೋಡಬೇಕು. ಅಲ್ಲಿಯವರೆಗೆ ನೀವು ಅಲ್ಲಿನ ಹೋಟೆಲ್‌ನಲ್ಲಿ ಚಹಾ, ಡ್ರಿಂಕ್ಸ್ ಕುಡಿಯುತ್ತ ಕೂಡಬಹುದು. ಉದ್ದನೆಯ ಸಾಲು ಬೇರೆ. ಅಲ್ಲಿ ಇಪ್ಪತ್ತೈದು ಜನ ನಿಂತಿದ್ದಾರೆಂದರೆ ಖಂಡಿತಾ ಅವರೆಲ್ಲ ಇಪ್ಪತ್ತು ದೇಶಗಳಿಗೆ ಸೇರಿದವರಾಗಿರುತ್ತಾರೆ. ನಾನು ಯೋಚಿಸತೊಡಗಿದೆ. ವ್ಯಾನ್‌ಗೊ ಹೇಗೆ ಬೆಳೆದ? ಅವನ ಚಿತ್ರಕಲಾ ಶೈಲಿಗೆ ಏನು ಕಾರಣ? ಅವನ ಚಿತ್ರಗಳು ಯಾಕಿಷ್ಟು ವೈವಿಧ್ಯಮಯ? ನನ್ನ ಭಾರತದಲ್ಲಿ ಅವನಂಥ ಒಬ್ಬ ಕಲಾವಿದ ಯಾಕೆ ಹುಟ್ಟಬರಲಿಲ್ಲ? ಎರಡು ಸಾವಿರ ವರ್ಷಗಳ ನಮ್ಮ ಚರಿತ್ರೆಯಲ್ಲಿ ಯಾಕೆ ಒಬ್ಬನೇ ಒಬ್ಬ ವ್ಯಾನ್‌ಗೊ, ಲಿಯನಾರ್ಡೊ ಡಾವಿಂಚಿ, ಸಿಲ್ವೆಡಾರ್ ಡಾಲಿ ಯಾಕಿಲ್ಲ? ಯಾಕೆಂದರೆ ಅವರು ಜಾತಿ, ಧರ್ಮ ಮತ್ತು ಆಹಾರದ ಗೋಜಲುಗಳಲ್ಲಿ ಬಿದ್ದವರಲ್ಲ. ಇದೆಲ್ಲ ಅವರಿಗೆ ಮುಖ್ಯವಲ್ಲ. ನಾವು ಇವರ ಜಾತಿ ಯಾವುದು? ಅವರ ಜಾತಿ ಯಾವುದು? ಯಾವ ಧರ್ಮ? ಇವರು ಸಸ್ಯಾಹಾರ ತಿನ್ನುತ್ತಾರೊ, ಮಾಂಸಾಹಾರ ತಿನ್ನುತ್ತಾರೊ? ಇದೇ ಗೋಜಲುಗಳಲ್ಲಿ ಒದ್ದಾಡುತ್ತಿರುತ್ತೇವೆ. ಬಾಲ್ಯದಿಂದಲೇ ನಮ್ಮ ತಲೆಯಲ್ಲಿ ನೂರಾರು ಬೇಲಿಗಳು ನಿರ್ಮಾಣಗೊಳ್ಳುತ್ತ ಬಂದಿವೆ. ವ್ಯಾನ್‌ಗೊ ತರಹದವರು ಇಂಥ ವಾತಾವರಣದಲ್ಲಿ ಬೆಳೆದು ಬಂದಿರಲು ಸಾಧ್ಯವೇ ಇಲ್ಲ. ಯಾರು ಏನು ತಿನ್ನುತ್ತಾರೆ ಎಂಬುದು ಅವನಿಗೆ ಮುಖ್ಯವೇ ಅಲ್ಲ. ಹೀಗಾಗಿ ಅವನ ಯೋಚನೆಗಳು ಎಲ್ಲ ಸೀಮೆಗಳನ್ನು ದಾಟಿ ಮುನ್ನಡೆಯುತ್ತವೆ. ನಾವೆಲ್ಲ ಎಂಥ ಜಟಿಲ ವಾತಾವರಣದಲ್ಲಿ ಬೆಳೆಯುತ್ತ ಬರುತ್ತೇವೆಂದರೆ, ಅವುಗಳಿಂದ ಮುಕ್ತವಾಗಲು ಅನೇಕ ಸಲ ಸಾಧ್ಯವಾಗುವುದೇ ಇಲ್ಲ. ಅವುಗಳಿಂದ ಮುಕ್ತವಾಗದೆ ದೊಡ್ಡ ಕಲೆ ಅರಳುವುದಿಲ್ಲ. ಇದರರ್ಥ ಅಲ್ಲಿ ನೂರಾರು ವ್ಯಾನ್‌ಗೊಗಳು ಇದ್ದಾರೆ ಅಂತಲ್ಲ. ಅಲ್ಲಿ ಕಲೆಯೊಂದು ಬೆಳೆದು ಬರಲು ಇರುವ ಸಾಧ್ಯತೆಗಳನ್ನು ನಾನು ಹೇಳುತ್ತಿರುವೆ. ಭಾರತೀಯ ಕಲಾವಿದ ಹೆಚ್ಚು ಸಂಘರ್ಷ ಮಾಡಬೇಕಾದ ಅಗತ್ಯದ ಕುರಿತು ಹೇಳುತ್ತಿರುವೆ. ನಾನು ಹೇಳಲು ಹೊರಟಿರುವುದೇನೆಂದರೆ, ದೊಡ್ಡ ಕಲೆ ಹುಟ್ಟುವ ತಾಣಗಳನ್ನು ನಾವು ಅರಿಯಬೇಕಾಗಿದೆ. ವ್ಯಾನ್‌ಗೊ ಒಂದು ಒಡೆದುಹೋದ ಸಮಾಜದ ವ್ಯಕ್ತಿ ಆಗಿರಲಿಲ್ಲ. ನಮ್ಮ ಮಾನಸಿಕ ಸೀಮೆಗಳನ್ನು ದಾಟುವುದು ಕಲಾವಿದ, ಲೇಖಕರಿಗೆ ಅಗತ್ಯ. ಒಂದು ಮುಕ್ತ ಬದುಕಿನ ಪರಿಚಯ ಅವರಿಗಿತ್ತು. ಈಗ ನಾವು ಬಂಗಾಳದ ಕಲಾವಿದರನ್ನು ಭೇಟಿ ಆದೆವೆಂದು ತಿಳಿದುಕೊಳ್ಳಿ. ಮೊದಲ ಚರ್ಚೆ ಬ್ರಾಹ್ಮಣರೊ, ಕಾಯಸ್ಥರೊ, ಮುಸ್ಲಿಮರೊ, ದಲಿತರೊ ಅಂತ ಶುರುವಾಗುತ್ತದೆ. ನಂತರ ಪೂರ್ವ ಬಂಗಾಳದವರೊ ಪಶ್ಚಿಮ ಬಂಗಾಳದವರೊ, ನಂತರ ಪರಗಣ ಜಿಲ್ಲೆಯವರೊ ಬೋಲ್‌ಪುರದವರೊ, ಕೊನೆಗೆ ನಮ್ಮ ವಿಭಿನ್ನ ಪರಿವಾರಗಳಿಗೆ ಚರ್ಚೆ ಬಂದು ನಿಲ್ಲುತ್ತದೆ. ಅಂದರೆ ಧ್ವಂಸಗೊಳ್ಳುವ ಮಾನಸಿಕತೆಗೆ ನಾವು ಸಿದ್ಧರಾಗಿದ್ದೇವೆ. ಇನ್ನು ಕರ್ನಾಟಕ, ಮಧ್ಯಪ್ರದೇಶ, ಕೇರಳದ ಮಾತಂತೂ ಬಿಡಿ. ಹಾಗಾದರೆ ಯಾರು ಯಾರ ಕಲೆಯನ್ನು ನೋಡಬೇಕು? ಯಾರ ಕಲೆಯನ್ನು ಅನುಭವಿಸಬೇಕು? ಯಾರ ಕಲೆ ಕುರಿತು ಮಾತಾಡಬೇಕು? ಇವೆಲ್ಲಾ ದಾರಿಗಳನ್ನು ಮುಚ್ಚಿಕೊಂಡಿದ್ದೇವೆ.

ನನ್ನ ದೃಷ್ಟಿಯಲ್ಲಿ ಕಲೆಗಳು ಮನುಷ್ಯತ್ವದೆಡೆಗಿನ ಪಯಣ. ನೀವು ಒಂದು ಕಲಾಕೃತಿಯ ಮೂಲಕ ಮನುಷ್ಯತ್ವದ ಹೊಸ ಆಯಾಮವೊಂದನ್ನು ಗುರುತಿಸತೊಡಗುತ್ತೀರಿ. ಆದರೆ ನಾವು ಇದನ್ನು ಮರೆಯುತ್ತಿದ್ದೇವೆ. ನಾವು ಏನು ಮಾಡುತ್ತೇವೆಂದರೆ, ನಮ್ಮ ಕಲಾಕೃತಿಗಳನ್ನು ಬೌದ್ಧಿಕವಾಗಿ ವಿವರಿಸುವ ಕಲಾವಿಮರ್ಶಕರನ್ನು ಹುಡುಕುತ್ತೇವೆ. ಅವರು ದಿಲ್ಲಿಯ ಸೌತ್‌ಬ್ಲಾಕ್‌ನಲ್ಲಿದ್ದಾರೆ ಅಂದುಕೊಳ್ಳೋಣ. ಅವರು ನಮ್ಮನ್ನು ವಿದೇಶಗಳಿಗೆ ಕಳುಹಿಸುತ್ತಾರೆ. ನಮ್ಮ ಪೇಂಟಿಂಗ್‌ಗಳನ್ನು ಕೊಳ್ಳುತ್ತಾರೆ. ಲಕ್ಷಲಕ್ಷ ರೂಪಾಯಿಗಳ ಮೋಹದಲ್ಲಿ ಅವರಿಗೆ ಇಷ್ಟವಾಗುವ ಕಲಾಕೃತಿಗಳನ್ನು ನಿರ್ಮಿಸತೊಡಗುತ್ತೇವೆ.